## ಜೇನಾಗುವಾ (1952)




'ಜೇನಾಗುವಾ' ಕವನಸಂಕಲನದಲ್ಲಿ ಕುವೆಂಪು ಅವರ ಸಾಂಸಾರಿಕ ಜೀವನ ಸಂದರ್ಭದ ಕವಿತೆಗಳಿವೆ. ಸಂಸಾರಿಯಾಗಲು ಸಮ್ಮತಿಸಿದ್ದು, ಶ್ರೀಮತಿ ಹೇಮಾವತಿ ಅವರ ಬಾಳಿಗೆ ಬಂದಿದ್ದು, ಪ್ರೀತಿ-ಪ್ರೇಮ, ಸರಸ-ಸಲ್ಲಾಪ, ವಿರಹ-ಮಿಲನ ಮೊದಲಾದವುಗಳೆಲ್ಲ ರಸಾತ್ಮಕವಾಗಿ ಮೂಡಿವೆ.

**ನಾ ನಿನಗೆ ನೀನೆನಗೆ ಜೇನಾಗುವಾ!**
**ರಸ ದೇವಗಂಗೆಯಲಿ ಮೀನಾಗುವಾ!**
**ಹೂವಾಗುವಾ ಹಣ್ಣಾಗುವಾ**
**ರತಿರೂಪಿ ಭಗವತಿಗೆ ಮುಡಿಪಾಗುವಾ!**

ಎನ್ನುವ ಸಂಕಲನದ ಮೊದಲ ಸಾಲುಗಳು, ದಾಂಪತ್ಯಜೀವನಕ್ಕೆ ಅಡಿಯಿಡಲು ನಿರ್ಧರಿಸಿದ ಕವಿಯ ಅಂತರಂಗದ ಬಯಕೆಯೂ ಹೌದು. 'ಗರ್ಭಗುಡಿ', 'ಬಿನ್ನಯ್ಸಿದಳು ತಾಯಪ್ಪಳಿಂತು' ಮೊದಲಾದ ಕವಿತೆಗಳು, ಚೊಚ್ಚಲು ಬಸುರಿಯಾದ ಮಡದಿಯಲ್ಲಿ ಕಂಡ ದರ್ಶನದ ವಾಗ್ರೂಪ. ಕುಮಾರಸಂಭವ, ನಾಮಕರಣೋತ್ಸವ, ತನುಜಾತನಹುದಾತ್ಮಜಾತನುಂ ಮೊದಲಾದ ಕವಿತೆಗಳು ಗಮನಸೆಳೆಯುತ್ತವೆ. ವಾತ್ಸಲ್ಯ ವಿರಹಿ ಸರಣಿಯ ಹದಿಮೂರು ಕವಿತೆಗಳಂತೂ ಕವಿಯ ಅತಿಮಧುರ ದಾಂಪತ್ಯದ ದಾಖಲಾತಿಗಳಾಗಿವೆ. ಈ ಸಂಕಲನದ ಬಹುತೇಕ ಕವಿತೆಗಳು ಕವಿಯ ಬದುಕಿನ ಸಂದರ್ಭಗಳನ್ನು ಒಳಗೊಂಡಿವೆ ಎಂಬುದು ಮಹತ್ವಪೂರ್ಣವಾದ ಅಂಶವಾಗಿದೆ.

**ಸಂಗ್ರಹದ ಕವನಗಳು**

1. ಜೇನಾಗುವಾ!
2. ಸಂಸಾರಿಯಾಗಲಿರುವ ಬ್ರಹ್ಮಚಾರಿಯ ಪ್ರಾರ್ಥನೆ
3. ಜೇನಿರುಳು ಅಥವಾ ಪ್ರಥಮ ಮಿಲನ
4. ಪ್ರಥಮ ವಿರಹ
5. ಓ ತೃಷಿತ ಚಂಚರೀಕ
6. ಮೂಕವಾಗಿಹುದೇಕೆ ಕವಿಯ ವಾಣಿ
7. ಲಲ್ಲೆ
8. ಹೋಗಿ ಬರುವೆನು
9. ರವಿಗೆ ಕವಿಯ ಸರಸ ನಿಂದೆ
10. ಬಾಳ್ವುದು!
11. ತೇಲಾಡಲಿ ತ್ರೈಭುವನಂ ರತ ತರಂಗದಿ!
12. ನಲ್ವಾತು
13. ಬರಿಯ ಮೆಯ್ಯ ಹೆಮ್ಮೆ ತಪ್ಪು!
14. ನನ್ನವಳು
15. ಗರ್ಭಗುಡಿ
16. ಬಿನ್ನಯ್ಸಿದಳು ತಾಯಪ್ಪಳಿಂತು
17. ವಿರಹ ಚಿತೆ
18. ಕವಿ-ಸಂಸಾರಿ
19. ಪ್ರಿಯ ಸತಿಗೆ
20. ಶೂನ್ಯ ಶೋಧನೆ
21. ಕುಮಾರ ಸಂಭವ
22. ಸ್ವಾಗತ ನಿನಗೆಲೆ ಕಂದಯ್ಯ
23. ನಾಮಕರಣೋತ್ಸವ
24. ತನಯನಿಗೆ
25. ತನುಜಾತನಹುದಾತ್ಮಜಾತನುಂ
26. ಅಮೃತಕಾಗಿ
27. ಕುಣಿಯುತ ಬಾ, ಕಂದಯ್ಯ
28. ಕಂದನ ಮೈ
29. ಹರಕೆಯ ಹರಕೆ
30. ಪ್ರಣಯ ಕಟಕಿ
31. ಬೆನಕನ ಚೌತಿ
32. ಬಂದನು ಬಾನತಿಥಿ
33. ಸಾಮಾನ್ಯತೆ ಭಗವಂತನ ರೀತಿ
34. ಉದಯಗಾನ
35. ರಸದರ್ಶಿ
36. ವಾತ್ಸಲ್ಯ ವಿರಹಿ 1
37. ವಾತ್ಸಲ್ಯ ವಿರಹಿ 2
38. ವಾತ್ಸಲ್ಯ ವಿರಹಿ 3
39. ವಾತ್ಸಲ್ಯ ವಿರಹಿ 4
40. ವಾತ್ಸಲ್ಯ ವಿರಹಿ 5
41. ವಾತ್ಸಲ್ಯ ವಿರಹಿ 6
42. ವಾತ್ಸಲ್ಯ ವಿರಹಿ 7
43. ವಾತ್ಸಲ್ಯ ವಿರಹಿ 8
44. ವಾತ್ಸಲ್ಯ ವಿರಹಿ 9
45. ವಾತ್ಸಲ್ಯ ವಿರಹಿ 10
46. ವಾತ್ಸಲ್ಯ ವಿರಹಿ 11
47. ವಾತ್ಸಲ್ಯ ವಿರಹಿ 12
48. ವಾತ್ಸಲ್ಯ ವಿರಹಿ 13
49. ಕೋಕಿಲೋದಯ ಚೈತ್ರ
50. ಹೆಸರಿಟ್ಟು ಹರಸುವೆನು ಚೈತ್ರನಂ
51. ನವರಾತ್ರಿ ಗೊಂಬೆ
52. ಕಂದನ ನಿದ್ದೆ-ತಂದೆಯ ಶ್ರದ್ಧೆ
53. ನಿರ್ವಾಣ
54. ನೀನಲ್ಲದ ಸೊಗಸಿಲ್ಲ
55. ನಖಕ್ಷತೇಂದು
56. ಒಲುಮೆಚೇಳು